**ಓಎಸ್. ನಂ.*268/2022***

**ಪಿಡಬ್ಲೂ:*01***

**ಇಂದು ದಿನಾಂಕ:*18.01.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು : 3 ನೇ ಪ್ರತಿವಾದಿ ಪರ ಶ್ರೀ.ಎಂ.ಎಂ. ವಕೀಲರಿಂದಃ</u>**

ನನಗೆ ಕನ್ನಡ ಓದು ಬರಹ ಗೊತ್ತಿಲ್ಲ. ನಮ್ಮ ತಂದೆಯಿಂದ ನನಗೆ ಭಾಗ ಕೊಡಬೇಕೆಂದು ಕೇಸು ಹಾಕಿದ್ದೇನೆ. ದಾವೆ ಹೂಡಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ವಾದ ಪತ್ರದಲ್ಲಿರುವ ವಿಷಯಗಳನ್ನು ತಿಳಿದಿದ್ದೇನೆ. ಈ ಕೇಸಿನಲ್ಲಿ ಪ್ರತಿವಾದಿ ಸಲ್ಲಿಸಿರುವ ಲಿಖಿತ ಹೇಳಿಕೆ ಗೊತ್ತು ಮತ್ತು ಪ್ರತಿವಾದಿ ಯಾವ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ತಿಳಿದಿದ್ದೀರಾ ಎಂದರೆ ನನಗೆ ಅವಶ್ಯಕತೆ ಇಲ್ಲ. ನನ್ನ ತಂದೆಯ ತಂದೆ ಹೆಸರು ಕಾಳೇಗೌಡ. ಸದರಿ ಕಾಳೇಗೌಡರಿಗೆ 5 ಜನ ಮಕ್ಕಳು ಅವರೆಂದರೆ ಕಾಳಮ್ಮ, ಜಯಮ್ಮ, ಸಣ್ಣೇಗೌಡ, ಕರೀಗೌಡ ಹಾಗೂ ಇನ್ನೊಬ್ಬ ಸಣ್ಣೇಗೌಡ. ಸಣ್ಣೇಗೌಡರನ್ನು ಚಿಕ್ಕಸಣ್ಣೇಗೌಡ ಎಂತಲೂ ಕರೆಯುತ್ತಾರೆ ಎಂದರೆ ಸರಿ. 5 ಜನ ಮಕ್ಕಳ ಪೈಕಿ ಜಯಮ್ಮ ಹೊರತುಪಡಿಸಿ ಉಳಿದವರೆಲ್ಲರೂ ಮೃತಪಟ್ಟಿದ್ದಾರೆ. ನನ್ನ ತಂದೆ ಸಣ್ಣೇಗೌಡರಿಗೆ 4 ಜನ ಮಕ್ಕಳು ಅವರೆಂದರೆ ಕಾಳೇಗೌಡ, ರಾಜೇಗೌಡ, ನಾನು ಮತ್ತು ಮಹದೇವ. ಸದರಿ ಮಹದೇವ ತೀರಿಕೊಂಡಿದ್ದಾರೆ, ಅವರಿಗೆ ಧನುಷ, ಕಾರ್ತಿಕ ಇಬ್ಬರು ಮಕ್ಕಳು. ನನ್ನ ಚಿಕ್ಕಪ್ಪ ಕರೀಗೌಡರ ಪತ್ನಿಯ ಹೆಸರು ನಿಂಗಮ್ಮ. ದಾವಾ ಆಸ್ತಿಗಳೆಲ್ಲವೂ ನನ್ನ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅಂತಹ ದಾಖಲೆಗಳೆಂದರೆ ಆರ್.ಟಿ.ಸಿಗಳು. ಅಂತಹ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸುಳ್ಳು. ದಾವಾ ಐಟಂ ನಂಬರ್ 1 ರಿಂದ 3 ರ ಆಸ್ತಿಗಳನ್ನು ನನ್ನ ತಂದೆ ದಿನಾಂಕ 06.11.2007 ರಂದು ಕ್ರಯ ಪತ್ರದ ಮೂಲಕ ಖರೀದಿಸಿರುವುದರಿಂದ ಅವುಗಳು ನನ್ನ ತಂದೆಗೆ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರಿಂದ 3 ರ ಆಸ್ತಿಗಳನ್ನು ನನ್ನ ತಂದೆ ದಿನಾಂಕ 13.11.2008 ರಂದು 3 ನೇ ಪ್ರತಿವಾದಿಗೆ ನೊಂದಾಯಿತ ವ್ಯವಸ್ಥಾ ಪತ್ರದ ಮೂಲಕ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ವ್ಯವಸ್ಥಾ ಪತ್ರವನ್ನು 3 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದರೆ ಸುಳ್ಳು. ದಾವಾ ಐಟಂ ನಂಬರ್ 1 ರಿಂದ 3 ರ ಆಸ್ತಿಗಳು 3 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬರುತ್ತಿದೆ ಎಂದರೆ ಸುಳ್ಳು ಹೇಳಿ ಖಾತೆ

ಮಾಡಿಸಿಕೊಂಡಿದ್ದಾರೆ. 3 ನೇ ಪ್ರತಿವಾದಿ ಮೋಸದಿಂದ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಪೊಲೀಸ್ ಠಾಣೆಗೆ ಅಥವಾ ಯಾವುದಾದರೂ ಪ್ರಾಧಿಕಾರಕ್ಕೆ ದೂರು ಸಲ್ಲಿಸಿದ್ದೀರಾ ಎಂದರೆ ನನಗೆ ಗೊತ್ತಾದ ಮೇಲೆ ನ್ಯಾಯಾಲಯಕ್ಕೆ ಕೇಸು ಹಾಕಿದ್ದೇನೆ. ಪೊಲೀಸ್ ಠಾಣೆಗೆ ದೂರು ಸಲ್ಲಿಸಿಲ್ಲ. ದಾವಾ ಐಟಂ ನಂಬರ್ 1 ರಿಂದ 3 ರ ಆಸ್ತಿಗಳನ್ನು ನನ್ನ ತಂದೆ ಕಾನೂನು ಬದ್ದವಾಗಿ 3 ನೇ ಪ್ರತಿವಾದಿಗೆ ವರ್ಗಾವಣೆ ಮಾಡಿರುವುದರಿಂದ ಅವರು ಕಾನೂನು ಬದ್ಧವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸುಳ್ಳು. ದಾವಾ ಐಟಂ ನಂಬರ್ 4 ರ ಆಸ್ತಿ ಕಂಪಲಾಪುರದಲ್ಲಿದೆ. ಅದರ ಪೂರ್ವಕ್ಕೆ ಸರ್ಕಾರದ ಓಣಿ, ಪಶ್ಚಿಮಕ್ಕೆ ಕೆರೆ ಮತ್ತು ಸೆಲ್ವಂ ರವರ ಜಮೀನು, ದಕ್ಷಿಣಕ್ಕೆ ಸ್ವಾಮಿರವರ ಜಮೀನು ಇರುತ್ತದೆ. ದಾವಾ ಐಟಂ ನಂಬರ್ 4 ರ ಆಸ್ತಿ ಈಗ ಯಾರ ಹೆಸರಿನಲ್ಲಿದೆ ಗೊತ್ತಿಲ್ಲ. ದಾವಾ ಐಟಂ ನಂಬರ್ 4 ರ ಆಸ್ತಿಯನ್ನು ಸಹ ನನ್ನ ತಂದೆ ಪ್ರತಿವಾದಿ 4 ಮತ್ತು 5 ರವರಿಗೆ ವ್ಯವಸ್ಥಾ ಪತ್ರದ ಮೂಲಕ ಮಾಡಿಕೊಂಡಿದ್ದಾರೆ ಎಂದರೆ ಮೋಸದಿಂದ ಮಾಡಿಕೊಂಡಿದ್ದಾರೆ. ದಾವೆ ಸಲ್ಲಿಸಲು ನನ್ನ ಅಣ್ಣ ಕಾಳೇಗೌಡ ದಾಖಲೆಗಳನ್ನು ಒದಗಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಸಣ್ಣೇಗೌಡ ಉರ್ಫ್ ಚಿಕ್ಕಸಣ್ಣೇಗೌಡರ ಹೆಂಡತಿ ಹೆಸರು ನಿಂಗಮ್ಮ ಮಕ್ಕಳ ಹೆಸರು ಜಯಣ್ಣ, ಸತೀಶ ಮತ್ತು ರಾಧ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**